

ಅಮೆರಿಕಾದಲ್ಲಿ ಪ್ರತಿ ವರ್ಷದಂತೆ ಕಳೆದ ವಾರ ಥ್ಯಾಂಕ್ಸ್ ಗಿವಿಂಗ್ ಆಚರಣೆ ನಡೆಯಿತು. ಟರ್ಕಿ ಕೋಳಿಗಳ ಖಾದ್ಯ ಮಾಡಿಕೊಂಡು ತಿಂದರು. ಆದರೂ ಈ ಕೋಳಿ 'ಪಾಪ್‌ಕಾರ್ನ್' ಅಧ್ಯಕ್ಷ ಒಬಾಮರಿಂದ ಕ್ಷಮಾದಾನ ಪಡೆಯಿತು. ಅದೂ 'ಹಂಗರ್ ಗೇಮ್ಸ್' ಮತದಾನದಲ್ಲಿ ಇತರ 79 ಟರ್ಕಿ ಕೋಳಿಗಳನ್ನು ಸೋಲಿಸಿ. ಯಾರಿಗೋ ಆಟ, ಟರ್ಕಿಗೆ ಪ್ರಾಣ ಸಂಕಟ ಎಂಬಂತೆ ಅಲ್ಲವೇ!

ಇಂಡಿಯಾನಾದ ಶಿಕ್ಷಕನಿಗೆ 53 ವರ್ಷಗಳ ನಂತರ ಪ್ರೇಮ ಪತ್ರ ಅಂಚೆಯಲ್ಲಿ ಬಂತಂತೆ. 1958ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗ ಶಿಕ್ಷಕ ಸಿದ್ದಿಖಿಯ ಗರ್ಲ್ ಫ್ರೆಂಡ್ ಬರೆದ ಪ್ರೇಮ ಪತ್ರ 2011ರಲ್ಲಿ ಬಂತಂತೆ. ಆಕೆಯನ್ನು ಮದುವೆಯಾಗಿ ಇಬ್ಬರು ಮಕ್ಕಳನ್ನು ಪಡೆದು ಎಂಟೇ ವರ್ಷಗಳಲ್ಲಿ ವಿಚ್ಛೇದನ ನೀಡಿಯೂ ಆಗಿತ್ತಂತೆ. ಯಾವುದೋ ಒಂದು ಕಾಲದಲ್ಲಾದರೂ ತಮ್ಮ ತಾಯಿಯ ಮೇಲೆ ಅಪ್ಪನಿಗೆ ಪ್ರೇಮವಿತ್ತು ಎಂಬುದು ಮಕ್ಕಳಿಗೆ ಈ ಪತ್ರದಿಂದ ಗೊತ್ತಾದಂತಾಯ್ತು ಎಂದನಂತೆ ಸಿದ್ದಿಖಿ!

# ಆಹಾ ಸುದ್ದಿ!

★ ಸಸಿತೋಟ

ಯೆಮನ್‌ನಲ್ಲಿ ಮದುವೆ ಸಂಭ್ರಮ ತುತ್ತ ತುದಿಗೇರಿತ್ತು. ಗಂಗ್ನಮ್ ಶೈಲಿಯಲ್ಲಿ ನೃತ್ಯ ಮಾಡುತ್ತಿದ್ದವರಲ್ಲಿ ಒಬ್ಬ ಎ.ಕೆ.- 47 ಗನ್‌ನಿಂದ ಗುಂಡು ಹಾರಿಸಿ ಮತ್ತೆ ನರ್ತಿಸತೊಡಗಿದ. ವಿಡಿಯೋ ತೆಗೆಯುತ್ತಿದ್ದವರು ನೆಲದ ಕಡೆ ಫೋಕಸ್ ಮಾಡಿದರೆ ಎರಡು ದೇಹಗಳು ರಕ್ತದಲ್ಲಿ ಮುಳುಗಿದ್ದವಂತೆ. ನರ್ತನದ ಸಂಗೀತ ನಿಂತು, ದುಃಖದ ಸಂಗೀತ ಶುರುವಾಯ್ತಂತೆ. ಯೆಮನ್ ಮದುವೆಯಲ್ಲಿ ಇದೆಲ್ಲಾ ಮಾಮೂಲು ಎಂದು ಪೊಲೀಸರು ಶರಾ ಬರೆದಿದ್ದಾರಂತೆ.



ಫುಟ್ಬಾಲ್ ಹುಚ್ಚಿನ ಬ್ರೆಜಿಲ್‌ನ ಅಮೆಜಾನ್‌ನಲ್ಲಿ ಮೂಲನಿವಾಸಿಗಳಿಗೆಂದೇ ಫುಟ್ಬಾಲ್ ಪಂದ್ಯಾವಳಿ ಇತ್ತೀಚೆಗೆ ನಡೆಯಿತು. ಬರೋಬ್ಬರಿ ಒಂದು ಸಾವಿರ ತಂಡಗಳ ಸೆಣಸಾಟದ ಮಧ್ಯೆ ವಿವಿಧ ವಿನೋದಾವಳಿಗೂ ಸ್ಥಾನವಿತ್ತು. ಈ ಚೆಲುವೆ 'ಮೂಲನಿವಾಸಿಗಳ ರಾಣಿ' ಸ್ಪರ್ಧೆಯಲ್ಲಿ ಭಾಗವಹಿಸಿದಾಕೆ. ಹಾವಭಾವ, ಸೌಂದರ್ಯಕ್ಕಿಂತ ಕಲೆಯ ಪ್ರದರ್ಶನಕ್ಕೆ ಒತ್ತು ಇತ್ತಂತೆ. ಇದರಲ್ಲೇನಾದರೂ ವಿಶ್ವ ಸುಂದರಿಯರು ಭಾಗವಹಿಸಿದ್ದರೆ ಮೊದಲನೇ ಸುತ್ತಿನಲ್ಲೇ ಹೊರಬೀಳುತ್ತಿದ್ದರು ಬಿಡಿ.

ಲಂಡನ್ನಿನ 'ಬಿಗ್ ಇಶ್ಯೂ' ನಿಯತಕಾಲಿಕ ಮಾರಾಟಗಾರ (ವೆಂಡರ್) ಓದುಗರಿಂದ ಕ್ರೆಡಿಟ್/ ಡೆಬಿಟ್ ಕಾರ್ಡ್ ಮೂಲಕ ಹಣ ಸ್ವೀಕರಿಸುವ ಮೊದಲ ವೆಂಡರ್ ಎನಿಸಿಕೊಂಡಿದ್ದಾನೆ. ವಸತಿರಹಿತರ ನೆರವಿಗೆ ನಿಂತಿರುವ ಈ ನಿಯತಕಾಲಿಕದ ಬೆಲೆ ಕೇವಲ 2.50 ಪೌಂಡ್. (ಸುಮಾರು 255 ರೂಪಾಯಿ). ಆರ್ಥಿಕ ಹಿಂಜರಿಕೆಯಿಂದ ಕುಸಿಯುತ್ತಿರುವ ಬ್ರಿಟಿಷರಿಗೆ 2.50 ಪೌಂಡ್ ತೆರುವುದೂ ಭಾರವೋ ಅಥವಾ ಚಿಲ್ಲರೆ ಇಲ್ಲ ಎಂದು ಸನ್ನೆ ಮಾಡುವ ಓದುಗರನ್ನು ಕಳೆದುಕೊಳ್ಳಲು ಸಿದ್ಧನಿಲ್ಲದ ಈ ವೆಂಡರ್‌ನ ಉಪಾಯವೋ? ಬ್ರಿಟಿಷರನ್ನು ಹಿಂಬಾಲಿಸುವ ನಾವು ಕಲಿತುಕೊಳ್ಳುವ ವಿಷಯವಂತೂ ಹೌದು.






ರಷ್ಯಾದ ಯುವಕ ಯೆಗೋರ್ 50ಕ್ಕೂ ಅಧಿಕ ವಿಷಪೂರಿತ ಜೇಡಗಳನ್ನು ಸಾಕಿಕೊಂಡಿದ್ದಾನಂತೆ. ಕೆಲವಂತೂ ಮನುಷ್ಯರಿಗೆ ಮಾರಣಾಂತಿಕ. ಹವ್ಯಾಸ ಹೀಗೂ ಉಂಟೆ ಎಂದು ಮೂಗು ಮುರಿಯುವವರ ಎದುರು ಯೆಗೋರ್ ಈಗ ಕ್ರಿಸ್ಮಸ್ ಹಾಗೂ ಹೊಸ ವರ್ಷದ ಪ್ರದರ್ಶನ ನೀಡಲು ಸಜ್ಜಾಗಿದ್ದಾನಂತೆ. ಹಣ ಮಾಡಲು ದೊಡ್ಡ ದೊಡ್ಡ ಹೂಡಿಕೆಯೇ ಆಗಬೇಕೆಂದಿಲ್ಲ.